12. ಈ ಕಂಟ್ರಾಕ್ಟನ್ನು ಷಕಮಿ ಇಜಾರೆಯಾಗಿ ಕೊಡಲ್ಪಡಕೂಡದು.

13. ಕಂಟ್ರಾಕ್ಟು ಷರತ್ತಿಗೆ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಜೈಲ್ ಸೂಪರ್‌ಟೆಂಡೆಂಟರವರು. ಮುನಾಸಬ್ ಅರಿತು 50 ರೂಪಾಯಿಗೆ ಹೆಚ್ಚದೆ ಜರಿಮಾನೆಯನ್ನು ವಸೂಲ್ ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ನೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ಬೆಗೆದು ಕೊಳ್ಳಬಹುದು.

14. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂದರ್ಭಗಳೆಲ್ಲಲ್ಲಾ ಸದರ ಸೂಪರ್‌ಟೆಂಡೆಂಟರವರ ಫೈಸಲೇ ಅಖೈರ್ ಫೈಸಲಾಗಿರತಕ್ಕದ್ದು.

15. ಖೈದಿಗಳ ಉಪಯೋಗಕ್ಕೋಸ್ಕರ ಅವಶ್ಯವಾದ ತರಕಾರಿಯನ್ನಾಗಲಿ, ಹಾಲನ್ನಾಗಲಿ ಮತ್ತು ಇತರ ಕೋವದೆ ಫಸಲನ್ನಾಗಲಿ ಕಂಟ್ರಾಕ್ಟು ದರದಂತೆಯೇ ಜೈಲಿನಿಂದ ಖರೀದಿಗೆ ತೆಗೆದು ಕೊಳ್ಳಲು ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು.

16. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್‌ಟೆಂಡೆಂಟರ ಅಭಿಪ್ರಾಯವನ್ನು ವಿಚಾರಿಸಿ ತಿಳಿದುಕೊಳ್ಳಬಹುದು.

17. ಈ ಕಂಟ್ರಾಕ್ಟುಗಳು ಮೈಸೂರು ಜೈಲ್ ಇನ್‌ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಬಳಪಟ್ಟು ಇರುವವು. ಇವರು ಎಲ್ಲಾ ದರಖಾಸ್ತುಗಳನ್ನೇ ಆಗಲಿ ಅಥವಾ ಯಾವ ಒಂದು ದರಖಾಸ್ತನ್ನೇ ಆಗಲಿ ತಿರಸ್ಕರಿಸತಕ್ಕ ಹಕ್ಕನ್ನು ಉಳಿಸಿ ಕೊಂಡಿರುವರು.

18. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಕೊನೇ ಪಕ್ಷ ಒಂದು ತಿಂಗಳಿಗೆ ಮುಂಚಿತವಾಗಿಯಾದರೂ ನೋಟಿಸ್ ಕೊಡಬೇಕು, ಮತ್ತು ಅವರ ನೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

19. ಇಜಾರೆದಾರರು ತಪ್ಪಿ ಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನು ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನು ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನು ಇಜಾರೆದಾರರು ಸರ್ಕಾರಕ್ಕೆ ಭರ್ತೀ ಮಾಡಿಕೊಡಬೇಕು.

ವಿಚಾರ—ಮೇಲೆ ನಮೂದಾದ ಕಂಟ್ರಾಕುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯತಿಯೂ ದೊರೆಯಲಾರದು.

ಯಾವ ಒಬ್ಬನೇ ಒಬ್ಬ ಕಂಟ್ರಾಕ್ಟದಾರನಾದರೂ ಸರಿಯೇ ಒಟ್ಟು ಇಜಾರೆಗೆ ಜಾಮೀನ್ ತರ್ಕ 475 ರೂಪಾಯಿಗಳನ್ನು ಠೇವಣಿ ಕಟ್ಟುವದರ ಮೂಲಕ ಒಂದೇ ದರಖಾಸ್ತಿನಲ್ಲಿ ಎಲ್ಲಾ ಪದಾರ್ಥಗಳಿಗೂ ದರಖಾಸ್ತು ಕೊಡಬಹುದು.

ಟಿ. ವಿ. ಆರ್‌ಮುಗಂ,
ಮೈಸೂರು ಜೈಲ್ ಸೂಪ್ರೆಂಟೆಂಡೆಂಟ್.

ಹಾ ಸ ನ ಡಿ ಸ್ಟ್ರಿಕ್ಟು.

ತಾರೀಖು 26ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಂ 1896—97ನೇ ಸಾಲಿಗೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಕಾರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನು ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಬರುವ ಜುಲೈ 14ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜು ಮೂಲಕ ವಿಲೇವಾರಿಯಾಗುತ್ತದೆ.

2. ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಜಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜ್ಯಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಜಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜ್ ಮಂಜೂರ್ ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಅಮಲ್‌ದಾರ್ರಿಂದ ಜಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಜಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸಸ್ಸ್ ದೇಖೀಲ್ ಜಡಸವಾಲ್ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೇದಾರ್ರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕಾರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತಾ ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕಾರಂಗದ ಕಲ್ಲುಗಳನ್ನು ತಾವೆ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಉಳ್ಳದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರ ಪೇನೂ ಇರುವಾಹಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕಾರಂಗದ ಕಲ್ಲುಗಳನ್ನು ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರ್ರು ಆಗಿಯಾಕೂಡದು. ಒಂದು ವೇಳೆ ಆಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ವಿಷಯಗಳಿಗೆ ಸಂಬಂಧಪಟ್ಟ ಕಂಡು ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ಎ. ಕೃಷ್ಣಸ್ವಾಮಯ್ಯಂಗಾರ್ರು,
ಡೆಪ್ಯೂಟಿ ಕಮ್ಮಿಷನರ್.